ಅಕ್ರಮ ಭೂಮಿ ಸಕ್ರಮಗೊಳಿಸಲು ರಚಿಸಲಾದ ಸಮಿತಿಗಳು

88 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಅಕ್ರಮ ಭೂಮಿ ಸಕ್ರಮಗೊಳಿಸಲು ಹೊಸ ಅಪರ ಸಮಿತಿಗಳನ್ನು ರಚಿಸಲು ಸರ್ಕಾರ ತೀರ್ಮಾನಿಸಿದೆಯೇ?*

ಆ) *ಹಾಗಿದ್ದಲ್ಲಿ, ಎಷ್ಟು ತಾಲ್ಲೂಕುಗಳಲ್ಲಿ ಇಂತಹ ಸಮಿತಿಗಳನ್ನು ರಚಿಸಲಾಗುವುದು;*

ಇ) *ಈಗಿರುವ ಸಮಿತಿಗಳ ಕಾರ್ಯನಿರ್ವಹಣೆಗೆ ಇರುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;*

ಈ) *ಹಾಗಿದ್ದಲ್ಲಿ, ಈ ತೊಂದರೆಗಳನ್ನು ಪರಿಹರಿಸಲು ತೆಗೆದುಕೊಂಡಿರುವ ಕ್ರಮಗಳೇನು?*

ಶ್ರೀ ಧರಮ್ ಸಿಂಗ್ (ಕಂದಾಯ ಸಚಿವರು) :

ಅ) ಹೌದು.

ಆ) ಯಾವ ಯಾವ ತಾಲ್ಲೂಕಿನಲ್ಲಿ ಉಳಿದಿರುವ ಪ್ರಕರಣಗಳು ಜಾಸ್ತಿ ಇವೆ ಅಂತಹ ತಾಲ್ಲೂಕುಗಳಲ್ಲಿ ಅಪರ ಸಮಿತಿಯನ್ನು ರಚಿಸಲಾಗುವುದು. ಇದಕ್ಕಾಗಿ ಆಯಾಯಾ ಮಾನ್ಯ ಶಾಸಕರುಗಳಿಂದಲೂ ಮತ್ತು ಜಿಲ್ಲಾಧಿಕಾರಿಗಳಿಂದಲೂ ಸಲಹೆಗಳನ್ನು ಕೇಳಲಾಗಿದೆ. ಸಲಹೆಗಳು ಬಂದಕಡೆಗಳಲ್ಲಿ ಅಪರ ಸಮಿತಿಗಳನ್ನು ರಚಿಸಲಾಗಿದೆ.

ಇ) ಮತ್ತು ಈ) ಈಗಿರುವ ಸಮಿತಿಗಳು ಕಾಲಕಾಲಕ್ಕೆ ಸೇರಿ ಉಳಿದಿರುವ ಪ್ರಕರಣಗಳನ್ನು ಶೀಘ್ರವಾಗಿ ವಿಲೇ ಮಾಡುತ್ತಿಲ್ಲವೆಂದು ಸರ್ಕಾರದ ಗಮನಕ್ಕೆ ಬಂದಿದೆ. ಆದಕಾರಣ ಸರ್ಕಾರವು ಅಪರ ಸಮಿತಿಗಳನ್ನು ರಚಿಸಲು ತೀರ್ಮಾನಿಸಿದೆ. ಇದಕ್ಕೆ ಅನುವಾಗುವಂತೆ ಸಂಬಂಧಿಸಿದ ನಿಯಮಾವಳಿಗಳನ್ನು ತಿದ್ದುಪಡಿ ಮಾಡಿ ಸುಗ್ರೀವಾಜ್ಞೆ ಸಹಾ ಈಗಾಗಲೇ ಹೊರಡಿಸಲಾಗಿದೆ.

ಕೇಂದ್ರ ಸರ್ಕಾರದ ಸಹಾಯ ಧನದಿಂದ ಕೈಮಗ್ಗ ನೇಕಾರರಿಗೆ ವಸತಿ

325 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೇಂದ್ರ ಸರ್ಕಾರದ ಸಹಾಯಧನದೊಂದಿಗೆ ಕೈಮಗ್ಗ ನೇಕಾರರಿಗೆ ವಸತಿ ಹಾಗೂ ಕಾರ್ಯಾಗಾರ ಯೋಜನೆಯಡಿಯಲ್ಲಿ ಈ ರಾಜ್ಯದಲ್ಲಿ ಮಂಜೂರಾದ ಮನೆಗಳ ಸಂಖ್ಯೆ ಎಷ್ಟು?*

ಆ) *ಈ ಮನೆಗಳನ್ನು ಕಟ್ಟಿಸುವ ಕೆಲಸ ಯಾವ ಹಂತದಲ್ಲಿ ಇದೆ.*

ಇ) *ಈ ಯೋಜನೆಯಡಿಯಲ್ಲಿ ಈ ವರ್ಷ ಎಷ್ಟು ಮನೆಗಳಿಗೆ ಕೇಂದ್ರ ಸರ್ಕಾರದ ಮಂಜೂರಾತಿ ಪಡೆಯಲಾಗುವುದು?*

ಶ್ರೀ ಹೆಚ್.ಕೆ. ಪಾಟೀಲ್ (ಜವಳಿ ರಾಜ್ಯ ಸಚಿವರು) :

ಅ) 759

ಆ) 280 ಮನೆಗಳ ನಿರ್ಮಾಣ ಕೆಲಸವು ಪೂರ್ಣಗೊಂಡಿರುತ್ತದೆ. 48 ಮನೆಗಳ ನಿರ್ಮಾಣದ ಕೆಲಸವು ಪ್ರಗತಿಯಲ್ಲಿದೆ. ಕರ್ನಾಟಕ ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮದ 431ನೇಕಾರರಿಗೆ ಮನೆಗಳನ್ನು ನಿರ್ಮಿಸಿ ಕೊಡಲು ಸಹಾಯಧನವಾಗಿ ಒಟ್ಟು ರೂ.60.34 ಲಕ್ಷಗಳು ಕೇಂದ್ರ ಸರ್ಕಾರದಿಂದ ಮಂಜೂರಾಗಿದ್ದು, ಇದಕ್ಕೆ ಸರಿಸಮಾನವಾಗಿ ಸಾಲದ ಮೊತ್ತ ರೂ. 60.34 ಲಕ್ಷಗಳ ಮಂಜೂರಾತಿಗಾಗಿ ಹೆಚ್.ಡಿ.ಎಫ್.ಸಿ.ಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಹಣ ಬಿಡುಗಡೆಯಾದ ನಂತರ ಮನೆಗಳನ್ನು ನಿರ್ಮಿಸಲು ಪ್ರಾರಂಭಿಸಲಾಗುವುದು.

ಇ) 2,490